**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆ: 66/2013**

ದಿನಾಂಕ: 26.08.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 2 ಪ್ರಾಸಾ - 6

| | | |
|---|---|---|
| ಹೆಸರು | : | ಶಿವರಾಮ್ |
| ತಂದೆಯ/ಗಂಡನ ಹೆಸರು | : | ಲೇಟ್ ಕೊಪ್ಪಸಿದ್ದಯ್ಯ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ವಲಯ ಅರಣ್ಯಾಧಿಕಾರಿ, ಚಾಮರಾಜನಗರ |
| ವಾಸಸ್ಥಳ | : | ಚಾಮರಾಜನಗರ |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಈ ಹಿಂದೆ 2006 ರಿಂದ 2013 ರವರೆಗೆ ಮಾಗಡಿ ವಲಯದಲ್ಲಿ ವನಪಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ದಿನಾಂಕ 12.04.2012 ರಂದು ನನಗೆ ಬಂದ ದೂರವಾಣಿ ಮಾಹಿತಿ ಪ್ರಕಾರ ಸಾವನದುರ್ಗದ ಜೋಡಿಗಟ್ಟೆ ಅರಣ್ಯ ಪ್ರದೇಶಕ್ಕೆ ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ಅನಾಮಧೇಯ ಶವವನ್ನು ಗಮನಿಸಿರುತ್ತೇನೆ. ಸದರಿ ಶವ ಮಖವಾಡೆ ಬಿದ್ದಿತ್ತು ಮತ್ತು ಸಾಕಷ್ಟು ಪ್ರಮಾಣದಲ್ಲಿ ಕೊಳೆತಿತ್ತು, ಅದರ ಅಸ್ಥಿಪಂಜರ ಕಾಣುತ್ತಿತ್ತು.

3. ನಂತರ ನಾವು ಸಂಬಂಧಪಟ್ಟ ಪೊಲೀಸರಿಗೆ ಪ್ರಥಮ ಮಾಹಿತಿ ದೂರನ್ನು ನೀಡಿದ್ದೇವೆ. ನಾವು ನೀಡಿರುವ ದೂರು ಈಗ ನನಗೆ ತೋರಿಸಿದ ದಾಖಲೆಯಾಗಿದೆ. ಅದನ್ನು ಈಗ ನಿಶಾನೆ ಪಿ 4 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 4(ಎ) ಎಂದು ಗುರುತು ಮಾಡಲಾಯಿತು.

**<u>ಪಾಟೀ ಸವಾಲುಃ</u> ಶ್ರೀ.ಟಿ.ಜಿ. ವಕೀಲರಿಂದ – ಆರೋಪಿಗಳ ಪರವಾಗಿಃ-**

4. ಶವ ಇತ್ತು ಎಂದು ಹೇಳಲಾದ ಪ್ರದೇಶವು ಸಾವನದುರ್ಗ ಮೀಸಲು ಅರಣ್ಯ ಪ್ರದೇಶ ಎಂದರೆ ಸರಿ. ಸದರಿ ಅರಣ್ಯ ಪ್ರದೇಶದಲ್ಲಿ ಸಾರ್ವಜನಿಕರ ಓಡಾಟ ನಿರ್ಬಂಧಿಸಲ್ಪಟ್ಟಿದೆ ಎಂದರೆ ಸರಿ. ಸದರಿ ಪ್ರದೇಶ ನಿರಂತರ ಅರಣ್ಯ ಸಿಬ್ಬಂದಿ ವರ್ಗದವರ ಕಣ್ಗಾವಲಿನಲ್ಲಿ ಇರುತ್ತದೆ ಎಂದರೆ ಸರಿ. ನಾನು ಪೊಲೀಸರ ಮಾತಿನ ಮುಲಾಜಿಗೆ ಅಸತ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಶವವನ್ನು ಮುಖ್ಯವಿಚಾರಣೆಯಲ್ಲಿ ನುಡಿದಂತೆ ಗಮನಿಸಿಲ್ಲ ಎಂದರೆ ಸರಿಯಲ್ಲ.

5. ನಾನು ಯಾವುದೇ ದೂರವಾಣಿ ಕರೆಯನ್ನು ಮುಖ್ಯವಿಚಾರಣೆಯಲ್ಲಿ ನುಡಿದಂತೆ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸದರಿ ದೂರವಾಣಿ ಕರೆಯ ಸಂಪೂರ್ಣ ಮಾಹಿತಿಯನ್ನು ನಾನು ನೀಡಿಲ್ಲ ಎಂದರೆ ಸರಿ ಮತ್ತು ಆ ಬಗ್ಗೆ ಈಗಲೂ ಉತ್ತರಿಸಲಾರೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.